ಅ) ಹೇಮಾವತಿ ನೀರಾವರಿ ಯೋಜನೆಗಾಗಿ ೧೫-೮-೯೧ನೇ ದಿನಾಂಕದಲ್ಲಿದ್ದಂತೆ ಖರ್ಚು ಮಾಡಲಾದ ಹಣವೆಷ್ಟು?

ಆ) ಈ ಯೋಜನೆ ಸಂಪೂರ್ಣ ಕಾರ್ಯಾರಂಭಗೊಳ್ಳುವವರೆಗೆ ಬೇಕಾಗಿರುವ ಹಣದ ಮೊತ್ತವೆಷ್ಟು.

ಇ) ಈ ಯೋಜನೆ ಪ್ರಾರಂಭವಾದ ನಂತರ ಇಲ್ಲಿಯವರೆಗೆ ವೆಚ್ಚವಾದ ಹಣವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಹೇಮಾವತಿ ನೀರಾವರಿ ಯೋಜನೆಗೆ ಇದುವರೆವಿಗೆ ರೂ. ೪೨೦ ಕೋಟಿ ರೂ.ಗಳು ಖರ್ಚಾಗಿದೆ.

ಆ)ಈ ಯೋಜನೆ ಸಂಪೂರ್ಣ ಕಾರ್ಯಾರಂಭಗೊಳ್ಳುವವರೆಗೆ ಇನ್ನೂ ರೂ.೬೫೦ ಕೋಟಿ ಬೇಕಾಗುತ್ತದೆ.

ಇ) ಈ ಯೋಜನೆ ಪ್ರಾರಂಭವಾದ ನಂತರ ಇಲ್ಲಿಯವರೆಗೆ ರೂ.೪೨೦ ಕೋಟಿ ಖರ್ಚಾಗಿದೆ.

ಬೆಂಗಳೂರು ದೂರದರ್ಶನದ ಎರಡನೇ ಚಾನಲ್

3081-ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಎರಡನೇ ಚಾನಲ್ ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆಯೇ

ಆ) ಬೆಂಗಳೂರು ದೂರದರ್ಶನ ಕೇಂದ್ರದಲ್ಲಿ ಕನ್ನಡ ಕಾರ್ಯಕ್ರಮಕ್ಕೆ ಪ್ರಥಮಾದ್ಯತೆ ದೊರಕಿಸಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು)

ಅ) ಹೌದು.

ಆ)

1) ಬೆಂಗಳೂರು ದೂರದರ್ಶನ ಕೇಂದ್ರದಿಂದ ಶನಿವಾರ ಹೊರತುಪಡಿಸಿ ಪ್ರತಿದಿನ ಸಂಜೆ ೫.೩೦ರಿಂದ ರಾತ್ರಿ ೮.೪೦ ಗಂಟೆಯವರೆಗೆ ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸಲಾಗುತ್ತಿದೆ.

2) ಶನಿವಾರ ಹಿಂದಿ ಚಲನಚಿತ್ರದ ನಂತರ ಕನ್ನಡದಲ್ಲಿ ವಾರ್ತೆ ಹಾಗೂ ಇತರೆ ಕಾರ್ಯಕ್ರಮಗಳನ್ನು ಬಿತ್ತರಿಸಲಾಗುತ್ತಿದೆ.

3) ಭಾನುವಾರದಂದು ಬೆಳಿಗ್ಗೆ ೮.೦೦ರಿಂದ ೯.೦೦ ಗಂಟೆಯವರೆಗೆ ಕನ್ನಡ ಕಾರ್ಯಕ್ರಮಗಳನ್ನು ಹಾಗೂ ಸಂಜೆ ಕನ್ನಡ ಚಿತ್ರವನ್ನು ಪ್ರಸಾರ ಮಾಡಲಾಗುತ್ತಿದೆ.

4) ಹೆಚ್ಚು ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸಲು ಒತ್ತಾಯಿಸಲಾಗಿದೆ.

5) ಕನ್ನಡ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ವೀಕ್ಷಿಸುವಂತಾಗಲು ಎಲ್ಲ ಮರುಪ್ರಸಾರ ಕೇಂದ್ರಗಳನ್ನು ಬೆಂಗಳೂರು ಕೇಂದ್ರದೊಂದಿಗೆ ಸಂಪರ್ಕ ಕಲ್ಪಿಸಲಾಗಿದೆ.